ಉ) ಹಾಗಿದಲ್ಲಿ, ಈ ಕೆಲಸವನ್ನು ಪ್ರಾರಂಭಿಸಲು ಕೂಡಲೇ ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ಮತ್ತು ಅತಿ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಹೌದು ಪರಿಶೀಲನೆಯಲ್ಲಿದೆ.

ಆ) ಅಂದಾಜನ್ನು ಅನುಮೋದಿಸಿದ ನಂತರ ಪ್ರಾರಂಭಿಸಲಾಗುವುದು.

ಇ) ೨೪-೩-೧೯೬೮.

ಈ) ೧೯೬೧ ರಿಂದ ಪರಿಶೀಲನೆಯಲ್ಲಿದೆ, ೧೯೬೬-೬೭ ಬಜೆಟ್‌ನಲ್ಲಿ ಸೇರಿತ್ತು.

ಉ) (ಅ) ಮತ್ತು (ಇ) ನಲ್ಲಿ ಉತ್ತರಿಸುವುದರಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯನ್ನು ನಾನು ಈ ಸದನದಲ್ಲಿ ಕೇಳುತ್ತಿರುವುದು ಇದು ಮೂರನೆ ಸಾರಿ, ಈ ಚಿಕ್ಕಬೂದನೂರು ನೀರಾವರಿ ಕೆಲಸವನ್ನು ಕೂಡಲೇ ಕೈಗೊಳ್ಳುವ ನಾನು ಸಲುವಾಗಿ ಹಿಂದಿನಸಾರಿ ಕೇಳಿದಾಗ ಈ ಕೆಲಸದ ಸರ್ವೆ ನಡೆದಿದೆ, ಇದನ್ನು ಪರಿಶೀಲಿಸುತ್ತಿದ್ದೇವೆ ಎಂದು ಹೇಳಿದರು. ಇದಕ್ಕೆ ಮಾನ್ಯಮಂತ್ರಿಗಳು ನಿಖರವಾಗಿ ಹೇಳಬೇಕು. ಏನೆಂದರೆ ಇದರ ಅಂದಾಜುವೆಚ್ಚ ಎಷ್ಟು ಆಗಬಹುದು ? ಮತ್ತು ಇದರಿಂದ ಎಷ್ಟು ಎಕರೆ ನೀರಾವರಿ ಆಗಬಹುದು ಎಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಈ ಮೊದಲು ಒಂದು ಎಸ್ಟಿಮೇಟ್ ತಯಾರಾಗಿತ್ತು. ಅವರ ಪ್ರಕಾರ ೧೪೦.೮೦ ಲಕ್ಷ ಅಂದಾಜುವೆಚ್ಚ. ನೀರಾವರಿ ಆಗತಕ್ಕಂಥ ಭೂಮಿ ೧೫೦೦ ಎಕರೆ ಎಂದಿತ್ತು. ಈ ವೆಚ್ಚ ಹೆಚ್ಚಾಗುತ್ತದೆ, ನಾವು ಏನು ರೀಶಿಯೋ ಫಿಕ್ಸ್ ಮಾಡಿದ್ದೇವೆ ಅದಕ್ಕಿಂತ ಹೆಚ್ಚಾಗುವುದರಿಂದ ಈ ಬಗ್ಗೆ ಮರುಪರಿಶೀಲನೆ ಮಾಡುವುದಕ್ಕೆ ಪುನಃ೧೪-೧-೬೮ರಂದು ಆಜ್ಞೆ ಆಯಿತು ಪುನಃ ಈ ಬಗ್ಗೆ ಎಸ್ಟಿಮೇಟ್ ತಯಾರಾಗಿ ೨೪-೩-೬೮ರಂದು ಬಂದಿದೆ. ಈಗ ಹೊಸ ಅಂದಾಜುವೆಚ್ಚ ೮೫ ಲಕ್ಷ ರೂಪಾಯಿಗಳು ಮತ್ತು ನೀರಾವರಿ ಆಗತಕ್ಕಂಥ ಪ್ರದೇಶ ೧೪೦೦ ಎಕರೆಗಳು ಈ ೮೮-೬೯ರಲ್ಲಿ ಇದರ ಬಗ್ಗೆ ಪರಿಶೀಲನೆಮಾಡಿ ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ. ಇದು ಮರು ಪರಿಶೀಲನೆಯಾಗಿ ಬಂದನಂತರ ವೆಚ್ಚ ಮತ್ತು ನೀರಾವರಿಯಾಗತಕ್ಕಂಥ ಭೂಮಿಯನ್ನು ಗಮನಕ್ಕೆ ತೆಗೆದುಕೊಂಡರೆ ಈ ವರ್ಷವೇ ಕೆಲಸ ಪ್ರಾರಂಭ ಮಾಡಬಹುದೇ ಹೇಗೆ ಎಂದು ಆಲೋಚನೆ ಮಾಡುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾಡಬಹುದು ಎಂದು ಅಲ್ಲ. ಬಹಳ ದಿವಸಗಳಿಂದ ಕೇಳುತ್ತಿದ್ದೇವೆ: ಬೆಳಗಾವಿ ಜಿಲ್ಲೆಯಲ್ಲಿ, ಬಿಜಾಪುರ, ಧಾರವಾಡಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಒಂದು ಸರ್ವೆ ಕೆಲಸವನ್ನೂ ಸಹ ಮಾಡಿಲ್ಲ. ಒಂದೂ ಮೈಸರ್ ಇರಿಗೇಶನ್ ಟ್ಯಾಂಕ್‌ಗೆ ಇವತ್ತಿಗೂ ಆಡಳಿತಾತ್ಮಕ. ತಾಂತ್ರಿಕ ಮಂಜೂರಾತಿಯನ್ನು ಕೊಟ್ಟಿಲ್ಲ. ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ ಎಂದು ಪೇಳುವಾಗ ಇದು ಫೀಸಿಬಲ್ ಟ್ಯಾಂಕ್ ಇದ್ದಾಗ ಹೆಚ್ಚಿನ ಅನುಕೂಲ ಇದ್ದಾಗ ಇದಕ್ಕೆ ಬೇಗನೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಇನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡುತ್ತೀರ ಎಂದು ನಿಖರವಾಗಿ ಹೇಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯ ತರಜ್ಞ ಕಮಿಟಿ ಮುಂದೆ ಇದೆ. ಅವರು ಇದನ್ನು ಒಪ್ಪಿ, ನಂತರಸರ್ಕಾರಕ್ಕೆ ಒಪ್ಪಿಸಬೇಕಾಗುತ್ತದೆ. ಇದು ಬಂದತಕ್ಷಣ ಈ ಬಗ್ಗೆ ನಿರ್ಣಯ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಲಾಗುವುದು.

ರಾಜ್ಯದಲ್ಲಿ ಕೃಷಿ ಇಲಾಖೆಗಳಿಂದ ರೈತರಿಗೆ ಬಿತ್ತನೆ ಬೀಜ ಬೆಳೆಸಲು ನೀಡಿದ ಭೂಮಿಯ ವಿಸ್ತೀರ್ಣ ಬಗ್ಗೆ

೯೨೪ (೧೯೨೧) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕೃಷಿ ಇಲಾಖೆಗಳಿಂದ ರೈತರ ಮೂಲಕ ಬಿತ್ತನೆ ಬೀಜಕ್ಕಾಗಿ (ಬೆಳೆಸಿದ) ಭತ್ತ ರಾಗಿ, ಜೋಳ, ಹತ್ತಿಬೀಜ, ಸೂರ್ಯಕಾಂತಿ ಇತರೆ ದ್ವಿದಳ ಧಾನ್ಯಗಳನ್ನು ಬೆಳೆಸಲಾಗಿರುವ ಪ್ರದೇಶದ ವಿಸ್ತೀರ್ಣವೆಷ್ಟು, ಇದಕ್ಕಾಗಿ ೧೯೬೭-೬೮ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು, ಆ ಪೈಕಿ ಖರ್ಚಾಗಿರುವ ಹಣವೆಷ್ಟು ?

ಅ) ಕೃಷಿ ಇಲಾಖೆಯು ಆಪೇಕ್ಷೆಯಂತೆ ರೈತರು ಬೆಳೆದ ಬಿತ್ತನೆ ಬೀಜಗಳನ್ನು ತಂದುಕೊಟ್ಟ ನಂತರ ಶೇ.೮೦ರಷ್ಟು ಬೆಲೆಯ ಹಣವನ್ನು ಪಾವತಿ ಮಾಡುತ್ತಿರುವುದು ನಿಜವೇ, ಮತ್ತು ಉಳಿದ ಶೇ.೨೦ ರಷ್ಟು ಹಣ ಎಷ್ಟು ದಿನದ ನಂತರ ಪಾವತಿ ಮಾಡಲಾಗುವುದು ?

ಇ) ಹಾಲಿ ರೈತರಿಂದ ಪಡೆದ ಬಿತ್ತನೆ ಬೀಜಗಳಿಗೆ ಸರ್ಕಾರವು ಪಾವತಿ ಮಾತದೆ ಬಾಕಿ ಉಳಿದಿರುವ ಹಣವೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಕೃಷಿ ಇಲಾಖೆಯು ಇಲಾಖೆಯ ಕೃಷಿ ಕ್ಷೇತ್ರಗಳಲ್ಲಿ ಮಾತ್ರ ಬೀಜೋತ್ಪಾದನೆಯನ್ನು ತೆಗೆದುಕೊಳ್ಳುತ್ತಿರುತ್ತದೆ ಮತ್ತು ಇಲಾಖೆಯು ರೈತರ ಮೂಲಕ ಯಾವ ಬೀಜೋತ್ಪಾದನೆಯನ್ನು ತೆಗೆದುಕೊಳ್ಳುತ್ತಿರುವುದಿಲ್ಲ. ಆದಕಾರಣ, ಈ ಕಾರ್ಯಕ್ಕಾಗಿ ಯಾವ ಹಣವನ್ನು ೧೯೮೭–೮೮ರಲ್ಲಿ ಬಿಡುಗಡೆ ಮಾಡಿರಲಿಲ್ಲ.

ಆ) ಮತ್ತು ಇ) ಮೇಲಿನ ಉತ್ತರದಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನನ್ನದೊಂದು ಪ್ರಶ್ನೆ ಇದೆ, ತಾವು ಅವಕಾಶ ಕೊಡದೇ ಹೋದರೂ ನನ್ನದೇನು ಆಕ್ಷೇಪಣೆ ಇಲ್ಲ. ನಾನು ಕೊಡಿ ಎಂದು ತಮಗೆ ಪೀಳುತ್ತಿಲ್ಲ. ನಾನು ಸ್ವಲ್ಪ ಲೇಟಾಗಿ ಬಂದೆ ಎಂದು ರಿಕ್ವೆಸ್ಟ್ ಮಾಡಿ ಬಂದು ಲೆಟರ್ ತಮಗೆ ಕಳುಹಿಸಿದ್ದೇನೆ.

ಅಧ್ಯಕ್ಷರು.—ನಾನು ಇನ್ನೊಮ್ಮೆ ಕರೆಯುತ್ತೇನೆ, ಇನ್ನೂ ಪ್ರಶ್ನೋತ್ತರ ಮುಗಿದಿಲ್ಲ. ನಿಮಗೆ ಸ್ವಲ್ಪ ಸಮಾಧಾನ ಬೇಡವೇ. ಇನ್ನೂ ೫ ನಿಮಿಷ ಇದೆ. ೯–೪೫ಕ್ಕೆ ಸಭೆ ಪ್ರಾರಂಭವಾಗಿದೆ. ಇನ್ನೂ ಒಂದು ತಾಸು ಆಗಿಲ್ಲ. ನಾನು ಮತ್ತೆ ಕರೆಯುತ್ತೇನೆ. ಪ್ರಶ್ನೋತ್ತರ ಮುಗಿದಿದೆ ಎಂದು ಹೇಳಿದ್ದೇನೆಯೇ ? ಅಬ್ಸೆಂಟ್ ಆದವರನ್ನು ಮತ್ತೊಮ್ಮೆ ಕರೆಯುತ್ತೇನೆ ಈಗ ಯಡಿಯೂರಪ್ಪ ನವರೇ, ತಾವು ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ನಾನು ಕೃಷಿ ಇಲಾಖೆ ಎಂದು ಹೇಳಿದ್ದೇನೆ, ಇದು ಅದಲ್ಲ. ಕರ್ನಾಟಕ ಸೀಡ್ ಕಾರ್ಪೊರೇಷನ್ ಬಗ್ಗೆ ತಮ್ಮ ಹತ್ತಿರ ಮಾಹಿತಿ ಇದ್ದರೆ ಕೊಡಬೇಕು. ಕರ್ನಾಟಕ ಸೀಡ್ ಕಾರ್ಪೊರೇಷನ್‌ನವರು ಬೀಜಗಳನ್ನು ರೈತರಿಂದ ಕೊಳ್ಳುತ್ತಿದ್ದಾರೆ. ಅವರಿಗೆ ೮೦ ಪರ್ಸೆಂಟ್ ದುಡ್ಡು ಕೊಟ್ಟು ಉಳಿದಿರುವ ೨೦ ಪರ್ಸೆಂಟ್ ಕೊಡುವುದು ತಡವಾಗಿದೆ. ಮೊದಲು ಕೊಡುವಂಥ ೮೦ ಪರ್ಸೆಂಟ್ ಹಣವನ್ನೂ ತಕ್ಷಣ ಕೊಡುತ್ತಿಲ್ಲ, ತಮ್ಮಲ್ಲಿ ಏನು ಪದ್ಧತಿ ಇದೆ. ಯಾವ ಸಮಯದಲ್ಲಿ ಕೊಡಬೇಕೆಂದು ತಮ್ಮ ಇಲಾಖೆಯು ಸಂಬಂಧ ಪಟ್ಟವರಿಗೆ ಆದೇಶ ನೀಡಿದೆ, ದಯಮಾಡಿ ತಿಳಿಸುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ (ವ್ಯವಸಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನ್ ಹೈಬ್ರಿಡ್ ಸೀಡ್, ನಾವು ಸೀಡ್ ಕಾರ್ಪೊರೇಷನ್ ಮುಖಾಂತರ ರೈತರಿಗೆ ಬೀಜ ಉತ್ಪಾದನೆ ಮಾಡಿ ಪ್ರೊಕ್ಯೂರ್ ಮಾಡುತ್ತೇವೆ. ಅವರು ಬೀಜವನ್ನು ಸರಂಡರ್ ಮಾಡಿದ ನಂತರ, ಇಮ್ಮಿಡಿಯಟ್ ಆಗಿ ೮೦ ಪರ್ಸೆಂಟ್ ಪೇಮೆಂಟ್ ಮಾಡುತ್ತೇವೆ. ಮತ್ತು ಉಳಿದ ೨೦ ಪರ್ಸೆಂಟ್ ಕೊಡುವುದಕ್ಕೆ ೨೫–೩೦ ದಿವಸ ಆಗುತ್ತದೆ. ಏಕೆಂದರೆ ನಮಗೆ ಬಿಲ್ಲುಗಳು ಬರಬೇಕು, ನಾಳೆ ಧಾರವಾಡದಲ್ಲಿ ಸರಂಡರ್ ಮಾಡಿದರೆ, ಅಥವಾ ದಾವಣಗೆರೆಯಲ್ಲಿ ಸರಂಡರ್ ಮಾಡಿದರೆ, ಅಲ್ಲಿಂದ ಬಿಲ್ಲುಗಳು ಬರ ಬೇಕಾಗುತ್ತದೆ. ನಂತರ ಬಿಲ್ ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತು ಕೇವಲ ೪ ಲಕ್ಷ ೮೦ ಸಾವಿರ ನಾವು ಕೊಡಬೇಕಾಗಿದೆ. ಆದಷ್ಟು ಬೇಗನೆ ಸರ್ಕಾರ ಕೊಡುವ ವ್ಯವಸ್ಥೆ ಮಾಡುತ್ತದೆ. ಹೈಬ್ರಿಡ್ಸ್ ಏನಿವೆ ಅವುಗಳ ಸರ್ಟಿಫಿಕೇಷನ್ ಆಗಬೇಕು, ಸರ್ಟಿಫಿಕೇಷನ್ ಆದ ಕೂಡಲೇ ಪೇಮೆಂಟ್ ಆಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನೇ ಸ್ವತಃ ೩ ತಿಂಗಳ ಹಿಂದೆ ಸೂರ್ಯಕಾಂತಿ ಬೀಜ ಮತ್ತು ಭತ್ತ ಕೊಟ್ಟಿದ್ದು, ೮೦ ಪರ್ಸೆಂಟ್ ಬಂದಿದೆ, ಉಳಿದಿರುವ ೨೦ ಪರ್ಸೆಂಟ್ ಹಣವನ್ನು ೩ ತಿಂಗಳು ಕಳೆದರೂ ಕೊಟ್ಟಿಲ್ಲ. ನಾನು ಈ ಪ್ರಶ್ನೆಯನ್ನು ಕೇಳಿದ ಉದ್ದೇಶ, ಕರ್ನಾಟಕ ಸೀಡ್ ಕಾರ್ಪೊರೇಷನ್‌ನವರು ಶುದ್ಧೀಕರಿಸಿದ ಒಳ್ಳೆಯ ಮಾಲನ್ನೇ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ

೮-೧೦ ದಿವಸಗಳಲ್ಲಿ ಸರ್ಟಿಫೈ ಆದಮೇಲೆ ರೈತನಿಗೆ ದುಡ್ಡು ಸಿಗದೇಹೋದರೆ, ರೈತನಿಗೆ ತೊಂದರೆ ಯಾಗುತ್ತದೆ. ಇದರಿಂದ ಜನರು ಪೂರಾಟ ಮಾಡಲು ಮುಂದೆ ಬರುತ್ತಿಲ್ಲ. ನಾನೇ ಸ್ವತಃ ಕೊಟ್ಟಿರುವುದಕ್ಕೆ ೩ ತಿಂಗಳು ಕಳೆದರೂ ದುಡ್ಡು ಬಂದಿಲ್ಲ. ಆದ್ದರಿಂದ ತಕ್ಷಣ ಪೇಮೆಂಟ್ ಆಗುವುದರ ಕಡೆಗೆ ಗಮನ ಕೊಡುತ್ತೀರಾ ಮತ್ತು ೨ನೆಯದು ಈ ರೀತಿ ರೈತರಿಂದ ಕರ್ನಾಟಕ ಸೀಡ್ ಕಾರ್ಪೊರೇಷನ್ ಬೀಜ ಕೊಳ್ಳುವುದಕ್ಕೆ ಮುಂದೆ ಬಾರದಿರುವುದಕ್ಕೆ ಕಾರಣ ಏನು, ರೈತರಿಗೆ ಉತ್ತೇಜನ ಕೊಡುವುದಕ್ಕೆ ಏನಾದರೂ ಕಾರ್ಯಕ್ರಮ ಇದೆಯೇ ? ನಿಮ್ಮ ಇಲಾಖೆಯಲ್ಲಿ, ರೈತರಿಗೆ ಒಳ್ಳೆಯ ಬಿತ್ತನೆ ಬೀಜ ಎಂದು ಪೂರೈಸುವ ಸಮಯದಲ್ಲಿ, ನಿಮ್ಮ ಕೃಷಿ ಇಲಾಖೆಯ ಅಧಿಕಾರಿಗಳು ಬಹಿರಂಗ ಪೂರು ಕಟ್ಟೆಯಲ್ಲಿ ಕೊಂಡುಕೊಂಡು ಸರ್ಟಿಫೈಡ್ ಸೀಡ್ಸ್ ಎಂದು ಮಾರುತ್ತಿದ್ದಾರೆ. ಅರಸೀಕೆರೆಯಲ್ಲಿ ಈ ರೀತಿ ಆದುದನ್ನು, ಒಂದು ತಿಂಗಳ ಹಿಂದೆ ತಮ್ಮ ಗಮನಕ್ಕೆ ತಂದಿದ್ದೆ. ಬಹಿರಂಗವಾಗಿ ಸೂರ್ಯ ಕಾಂತಿ ಬೀಜವನ್ನು ೬ ರೂಪಾಯಿಗೆ ತೆಗೆದುಕೊಂಡು, ೧೧ ರೂಪಾಯಿಗೆ ಮಾರುತ್ತಿದ್ದಾರೆ. ಇದನ್ನು ಬಿಗಿ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಈ ತರಹ ದೂರು ಏನಾದರೂ ತಮಗೆ ಬಂದಿದೆಯೇ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ೨೫-೩೦ ದಿವಸಗಳ ನಂತರ ಪೇಮೆಂಟ್ ಆಗುತ್ತದೆ ಎಂದು ಹೇಳಿದೆ. ಇದು ತಜವಾಗುತ್ತಿದೆ ಎಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ, ಆದಷ್ಟು ಬೇಗನೆ ಪೆ ಮೆಂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಕಳಪೆ ಬೀಜ ಮಾರುತ್ತಿದ್ದಾರೆ ಎಂಬ ವಿಚಾರವಾಗಿ, ಜಿಲ್ಲಾ ಅಧಿಕಾರಿಗಳಿಗೆ, ಚೀಫ್ ಸೆಕ್ರಟರಿಯವರಿಗೆ ನಮ್ಮ ಇಲಾಖೆಯ ಸಿಬ್ಬಂದಿಗೆ ಆದೇಶ ಕೊಟ್ಟಿದ್ದೇವೆ. ಎಲ್ಲೆಲ್ಲಿ ಕಳಪೆ ಬೀಜ ಮಾರುತ್ತಿದ್ದಾರೆ, ಅಲ್ಲೆಲ್ಲಾ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಈ ಪ್ರಕಾರ ಸರ್ಕಾರ ಕೆಲಸ ಮಾಡುತ್ತಿದೆ. ತಾವು ಯಾವುದಾದರೂ ಸ್ಪೆಸಿಫಿಕ್ ಆಗಿ, ಇಂತಹ ಕಡೆ ಇಂಥಾದ್ದು ಆಗಿದೆ ಎಂದು ನನ್ನ ಗಮನಕ್ಕೆ ತಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಮುಡಿಯೂರಪ್ಪ.—ತಾವು ಏನು ಬೀಜವನ್ನು ಕೊಳ್ಳುತ್ತೀರಿ, ಅದಕ್ಕೆ ಕೊಡುತ್ತಿರುವ ಬೆಲೆಯೂ ಸಾಲದು. ೧೦ ಚೀಲ ಸೂರ್ಯಕಾಂತಿಯನ್ನು ಕಳುಹಿಸಿದರೆ, ಅದನ್ನೆಲ್ಲಾ ತೂರಿ ಶುದ್ಧ ಮಾಡಿದ ಮೇಲೆ ೪ ಚೀಲ ತೆಗೆದುಕೊಂಡು, ೬ ಚೀಲ ವಾಪಸ್ ಕಳುಹಿಸುತ್ತೀರಿ. ನಾನು ಇದು ತಪ್ಪು ಎಂದು ಹೇಳುವುದಿಲ್ಲ. ಒಳ್ಳೆಯ ಬೀಜವನ್ನು ಆರಿಸಿ ತೆಗೆದುಕೊಳ್ಳುವುದರಿಂದ, ಮತ್ತು ರೈತ ಬೆಳೆದುಕೊಂಡು ತಂದ ಮಾಲಿಗೆ ಕೊಡುತ್ತಿರುವ ಬೆಲೆಯು ಸಾಲದೇ ಇರುವುದರಿಂದ, ರೈತನಿಗೆ ಒಳ್ಳೆಯ ಬೆಲೆ ಕೊಡಬೇಕೆಂಬ ಅಪೇಕ್ಷೆ ನಿಮಗೆ ಇದ್ದರೆ, ಹೆಚ್ಚಿನ ಬೆಲೆಯನ್ನು ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ? ಅಥವಾ ಈ ಸಮಸ್ಯೆ ಇದೆಯೆಂದು ತಮಗೆ ಅನಿಸಿದೆಯೇ, ರೈತನು ಬೆವರು ಸುರಿಸಿ ಬೆಳೆದ ಬೆಳೆಗೆ ತಕ್ಕಂತೆ ಬೆಲೆ ಸಿಗುತ್ತಿಲ್ಲವೆಂದು ತಮಗೆ ಗೊತ್ತಾಗುತ್ತಿದೆಯೇ ?

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ, ಕಳೆದ ವರ್ಷ ಹತ್ತಿ ಬೀಜ ಒಂದು ಕೆ.ಜಿ. ಗೆ ೮೫ ರೂಪಾಯಿಯಂತೆ ತೆಗೆದುಕೊಳ್ಳುತ್ತಿದ್ದೆವು, ನಂತರ ನಾವೇ ಬೀಜ ಉತ್ಪಾದನೆ ಮಾಡುವವರಿಗೆ ಸ್ವಲ್ಪ ಹೆಚ್ಚು ಬೆಲೆ ಕೊಡಬೇಕೆಂದು ಈಗ ೧೨೦ ರೂಪಾಯಿ ಮಾಡಿದ್ದೇವೆ. ಇದರಿಂದ ಏನಾಯಿತು ಎಂದರೆ, ಈ ವರ್ಷ ಎಷ್ಟೋಜನ ನಮಗೆ ಬೀಜವನ್ನು ಸರಂಡರ್ ಮಾಡಿಲ್ಲ ಇದರಿಂದ ಈ ವರ್ಷ ಎಷ್ಟೋ ಪ್ಯಾಬ್ಲಮ್ ಆಗಿದೆ. ಆದರೆ ಪ್ಯಾಡಿ ಆಗಲಿ, ರಾಗಿ ಆಗಲೀ, ಆ ಸೀಡ್‌ಗಳನ್ನು ನಾವು ಯಾವ ದರಕ್ಕೆ ಕೊಡುತ್ತಿದ್ದೇವೆ. ಆ ದರಕ್ಕೆ ನಮಗೆ ಕೊಳ್ಳುವುದಕ್ಕೆ ಆಗುವುದಿಲ್ಲ. ಇದರಿಂದ ಸೀಡ್ಸ್ ಕಾರ್ಪೊರೇಷನ್‌ಗೆ ಈ ಪ್ಯಾಡಿ ರಾಗಿ ಅಥವಾ ಬೇರೆ ಯಾವುದೇ ಬೀಜದ ವ್ಯಾಪಾರದಿಂದ ಲಾಭ ಇಲ್ಲ. ಆದರೆ ಒಳ್ಳೆಯ ಗುಣಮಟ್ಟದ ಬೀಜ ಕೊಡಬೇಕಾದರೆ ನಾವು ರೈತರಿಗೆ ಉತ್ತೇಜನ ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಅವರಿಗೆ ಹೆಚ್ಚಿನ ಬೆಲೆ ಕೊಡುವುದಕ್ಕೆ ಸರಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೬೩೦ (೨೭೬೧) ಶ್ರೀ ಕೆ. ಜಿ. ರಾಮಸ್ವಾಮಿ.—ಹಾಜರಿಲ್ಲ. ಮಲ್ಲಿಕಾರ್ಜುನ ಖರ್ಗೆಯವರೇ, ನಿಮ್ಮದನ್ನು ಮಾನ್ಯ ಮುಖ್ಯಮಂತ್ರಿಗಳು ಬರಲಿ, ಆ ಮೇಲೆ ತೆಗೆದುಕೊಳ್ಳೋಣ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಆರ್. ವೆಂಕಟರಾಮಯ್ಯ.—ನನ್ನದು ಒಂದು ಪ್ರಿವಿಲೇಜ್ ಮೋಷನ್ ಇದೆ, ಮೂವ್ ಮಾಡಿಬಿಡುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಗೆಜೆಟೇ ತಾರೀಖು ನಾನು ಬ್ರೀಚ್ ಆಫ್ ಪ್ರಿವಿಲೇಜ್ ಬಗ್ಗೆ ನೋಟೀಸ್ ಕೊಟ್ಟಿರುತ್ತೇನೆ. ಇದನ್ನು ಅಪ್ರೊಪ್ರಿಯೇಷನ್ ಬಿಲ್ ಆದ ಮೇಲೆ ತೆಗೆದುಕೊಳ್ಳಬಹುದು. ನನ್ನದೇನೂ ಆಭ್ಯಂತರ ಇಲ್ಲ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ, ನಿಮ್ಮದು ಅವರದ್ದು ಕೂಡಿ ಆ ಮೇಲೆ ಒಮ್ಮೆಗೆ ತೆಗೆದುಕೊಳ್ಳೋಣ, ಈಗ ವಿಧೇಯಕದ ಮಂಡನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ದಕ್ಷಿಣ-ಕನ್ನಡ ಜಿಲ್ಲೆಯಲ್ಲಿನ ವಿವಿಧ ಇಲಾಖೆಗಳಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳು

918 (2171) ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಸ್ಥಾಪನೆಯಾಗುವ ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಂದ ಕೈಗೊಂಡ ಕಾಮಗಾರಿಗಳಿಗೆ ಪಾವತಿ ಮಾಡಬೇಕಾಗಿದ್ದ ಹಣವೆಷ್ಟು ?

ಆ) ಜಿಲ್ಲಾ ಪರಿಷತ್ ಸ್ಥಾಪನೆ ಆದ ನಂತರ ಪಾವತಿಯಾದ ಮತ್ತು ಬಾಕಿ ಇರುವ ಹಣ ಎಷ್ಟು?

ಇ) ಬಾಕಿ ಉಳಿದಿರುವ ಕೆಲಸ ಪೂರ್ತಿಗೊಳಿಸಲು ಹಾಗೂ ಬಾಕಿ ಹಣ ಪಾವತಿ ಮಾಡಲು ಬೇಕಾಗುವ ಸಮಯವೆಷ್ಟು ?

ಈ) ಮಂಡಲ ವರ್ಗ-2 ಕಾರ್ಯಕ್ರಮದಂತೆ ಪಾವತಿಗೆ ವಿಳಂಬವಾಗುವುದಿದ್ದಲ್ಲಿ ಪ್ರಾರಂಭಿಸಿದ ಕಾಮಗಾರಿಗಳನ್ನು ಪೂರ್ತಿಗೊಳಿಸುವುದು ಸರ್ಕಾರದ ಹೊಣೆಗಾರಿಕೆ. ಆದ್ದರಿಂದ ಈ ಕುರಿತು ವಿಶೇಷ ನೆರವು ಸರ್ಕಾರ ನೀಡಲಾಗುವುದೇ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಅಬ್ದುಲ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

ಅ) 71,50,231-00 ರೂ.ಗಳು.

ಆ) ಪಾವತಿಯಾದ ಹಣ 71,00,185 ರೂ.ಗಳು. ಬಾಕಿ ಇರುವ ಹಣ 50,046 ರೂ.ಗಳು

ಇ) 3 ವರ್ಷಗಳೊಳಗೆ ಪೂರ್ತಿಗೊಳಿಸಲಾಗುವುದು ಮತ್ತು ಹಣ ಸಿಗುವ ಆಧಾರದ ಮೇಲೆ ಪಾವತಿ ಮಾಡಲಾಗುವುದು ಎಂದು ಜಿಲ್ಲಾ ಪರಿಷತ್‌ನವರು ತಿಳಿಸಿದ್ದಾರೆ.

ಈ) ಅಪೂರ್ಣವಾದ ಕೆಲಸಗಳನ್ನು ಪೂರ್ಣಗೊಳಿಸಲು ಜಿಲ್ಲಾ ಪರಿಷತ್ ತನ್ನ ಬಜೆಟ್‌ನಲ್ಲಿ ಅಳವಡಿಸಿಕೊಂಡು ಪೂರ್ಣಗೊಳಿಸಬೇಕಾಗಿದೆ.

ಉ) ಪ್ರಶ್ನೆ (ಈ)ನಲ್ಲಿ ಉತ್ತರಿಸುವುದರಿಂದ ಉದ್ಭವಿಸುವುದಿಲ್ಲ.

ಆಳಂದ್ ತಾಲ್ಲೂಕಿನಲ್ಲಿ ಜೀಪ್ ಕಟ್ಟಡ ನ್ಯಾಯಾಲಯ ಕಟ್ಟಡಗಳ ಬಗ್ಗೆ

926 (2398) ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಆಳಂದ್ ತಾಲ್ಲೂಕಿನಲ್ಲಿನ ಜೈಲು ಕಟ್ಟಡ ಹಾಗೂ ನ್ಯಾಯಾಲಯದ ಕಟ್ಟಡಗಳನ್ನು ಮಂಜೂರು ಮಾಡಿ ಎರಡು ಮೂರು ವರ್ಷಗಳಾಗಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಈ ಕಟ್ಟಡಗಳ ಕೆಲಸಗಳು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ? ಹಾಗೂ ಈ ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?